ಸಮಯ ಸರಿದಂತೆ ಆಯಾಮಗಳು ಬದಲಾಗುತ್ತ ಆಮಿಷ ಮೂಡಿ ಛೆ! ಸರಿಯಲ್ಲ, ಇಷ್ಟುದಿನ ಕಾಣಿಸಿಕೊಳ್ಳದ್ದು ಈಗೆಲ್ಲಿಂದ ಅಂತ ತೊಡೆದುಹಾಕಲು ನೋಡಿದರೂ ಮತ್ತೆ ಮತ್ತೆ ಅದೇ. ಹೊಕ್ಕಳ ಹತ್ತಿರ ಚುಳ್ಳೆಂದಂತಾಗಿ ಬೆಳಗಿನಜಾವ ಹತ್ತಿದ ನಿದ್ದೆಯಲ್ಲೂ ಸ್ವಪ್ನಗಳು. ಆತ ಕಲಿಸುತ್ತಿದ್ದ ವಿದ್ಯಾಸಂಸ್ಥೆಯಲ್ಲೂ ಹುಡುಗಿಯರಿದ್ದರು, ಶಿಕ್ಷಕಿಯರಿದ್ದರು. ಎಲ್ಲ ಮನುಷ್ಯ ಜೀವಿಗಳು ಎಂಬ ನಿರ್ವಿಕಾರ ಸಂಯಮದಿಂದ ವ್ಯವಹರಿಸುತ್ತಿದ್ದವನೀಗ ಏಕಾಗ್ರತೆಯುಳಿಯದೆ ಅಧೀರನಾದ. ಹೀಗೆ ಎರಡು ದಿನ ಸಂಕಟ, ತಳಮಳದಲ್ಲಿ ಕಾಲ ಹಾಕಿದವ ಮೂರನೇ ದಿನ ಸಾಯಂಕಾಲ ನಿರ್ಧಾರ ಹೆಪ್ಪುಗಟ್ಟಿ ಆ ಮನೆಯತ್ತ ಹೆಜ್ಜೆ ಹಾಕಿದ. ಮಾತಾಡಿಸಲು ಬರುವ ಸಂಪ್ರದಾಯವಿದ್ದುದಕ್ಕೆ ಅದು ಅಸಹಜವೂ ಆಗಿರಲಿಲ್ಲ. ಮಂಜರಿ ತಲೆ ತಗ್ಗಿಸಿ ಕುಳಿತಿದ್ದಳು. ತಾನೀಗ ಸಾಂತ್ವನದ ಮಾತು ಸುರುಮಾಡಿದರೆ ಅವಳು ಅಳಬಹುದು. ಮತ್ತೆ ಸಾಧ್ಯವಾಗದೆ ಹೋಗಬಹುದು ಅನಿಸಿ 'ಮಂಜರಿ, ಒಂದುಸಾರಿ ನನ್ನ ಮನೆಗೆ ಬಾ. ಎದುರು ಅಪಾರ್ಟ್‌ಮೆಂಟಿನ ಮೂರನೆಮಹಡಿ, ಮೂವತ್ನಾಲ್ಕು' ಅಂದ. ಅವಳು ಯಾಕೆ ಅನ್ನುವಂತೆ ನೋಡಿದಳು. 'ನನ್ಹತ್ತಿರ ಆವತ್ತಿನ ಫೋಟೊ ಇದೆ... ನೋಡೋದಾದ್ರೆ ಬಾ' ಅನಿಶ್ಚಿತತೆಯಲ್ಲಿ ಅವನನ್ನೆ ನೋಡಿದಳು. 'ಹೆದರಬೇಡ, ಆದರೆ ಖಂಡಿತಾ ಬಾ...' ಅಂದವ ತಟ್ಟನೆ ಎದ್ದ.

ಮನೆಯಲ್ಲಿ ಕುಳಿತವನಿಗೆ ಅವಳು ಬರುತ್ತಾಳಾ ಎಂಬ ಸಂದೇಹ ಕಾಡಿತು. ಅವಳ ಮುಖದಲ್ಲಿ ಭಯಮಿಶ್ರಿತ ಕುತೂಹಲ ಕಾಣಿಸಿತ್ತು. ಬಂದೇ ಬರುತ್ತಾಳೆ ಅನಿಸಿತ್ತು. ಅಕಸ್ಮಾತ್ ಬರದಿದ್ದರೆ ತನ್ನ ಮುಂದಿನ ನಡೆಯೇನಿರಬೇಕು ಎಂದು ಯೋಚಿಸಿದ. ಸ್ಪಷ್ಟವಾಗಿ ಏನೂ ಹೊಳೆಯಲಿಲ್ಲ. ಆ ಮನಃಸ್ಥಿತಿಯಲ್ಲೆ ಊಟ ಮುಗಿಸಿದ. ಹನ್ನೊಂದು ಗಂಟೆಯಾಯ್ತು, ಇನ್ನು ಸಾಕು ಅಂತ ಹಾಲಿನ ದೀಪವಾರಿಸಿ ತಿರುಗುವಾಗ ಸದ್ದು ಕೇಳಿಸಿತು. ಬಾಗಿಲು ಮೃದುವಾಗಿ ತಟ್ಟಿದ ಸದ್ದು. ತೆರೆದ. ಮಲಗುವ ಕೋಣೆಯ ಬೆಳಕಿನಲ್ಲಿ ಅವಳು ಗೋಚರಿಸಿದಳು. ಒಳಬಂದಕೂಡಲೆ ಬಾಗಿಲು ಹಾಕಿದ.

'ಅಂಕಲ್... ಏನದು ಫೋಟೊ... ಬೇಗ ಹೇಳಿ, ನಾನು ಹೋಗ್ಬೇಕು' ಧೈರ್ಯ ಒಗ್ಗೂಡಿಸಿಕೊಳ್ಳುವಂತಿತ್ತು. 'ಮಂಜರಿ ನೀನು ತಾತನ್ನ ಯಾಕೆ ಕೊಂದೆ?' ನೇರವಾಗಿ ಕೇಳಿದ.

'ಏನು? ನಾನು ತಾತನ್ನ ಕೊಂದ್ನಾ? ತಮಾಷೆಗೂ ಹೇಳ್ಬೇಡಿ ಅಂಕಲ್, ನಿಮ್ಗೆ ಪಾಪ ಬರುತ್ತೆ.'

'ಸರಿಯಮ್ಮ, ಇಲ್ನೋಡು.' ಮೊಬೈಲ್ ತೆರೆದ. 'ಇದು ನಿಮ್ಮನೆ ತಾನೇ... ಇವ್ರು ನಿನ್ನ ತಾತ ಅಲ್ವಾ... ಈ ಹುಡುಗಿ ನೀನೇನಾ?' 'ಇದೆಲ್ಲ ಏನೋ ಗೊತ್ತಿಲ್ಲ. ನೀವೇ ಸೃಷ್ಟಿಸಿರೋದು. ನಿಮ್ಮೇಲೆ ಕಂಪ್ಲೇಂಟು ಕೊಡಬೇಕಾಗುತ್ತೆ' ಧೈರ್ಯ ನಟಿಸಿದಳು. 'ಆಯ್ತು ಇದನ್ನ ಪೊಲೀಸಿಗೆ ಕೊಡತೀನಿ, ನೀನು ಹೋಗು' ಮಂಜರಿ ಮಾತಿಲ್ಲದೆ ನಿಂತಳು. 'ಅಂಕಲ್...' ದನಿ ನಡುಗುತ್ತಿತ್ತು. 'ಸರಿ, ಯಾಕೆ ಕೊಂದೆ ಹೇಳು...' 'ನಂಗೆ ತಾತ ಅಂದ್ರೆ ಪ್ರಾಣ. ಖಂಡಿತಾ ಕೊಲ್ಲೋ ಉದ್ದೇಶ ಇರ್ಲಿಲ್ಲ. ಆ ಕ್ಷಣಕ್ಕೆ ಅದೆಲ್ಲಾ...' 'ಅದೇ ಯಾಕೆ ಹೇಳು' ಒತ್ತಿ ಹೇಳಿದ. 'ನಂಗೆ ಸ್ಕೂಟಿ ಬೇಕೆಂಬಾಸೆ. ತಾತನ ಹತ್ತಿರ ಇರೋ ದುಡ್ಡನ್ನ ಎಷ್ಟು ಪೀಡಿಸಿದ್ರು ಕೊಡತಿರಲಿಲ್ಲ. ಮದ್ವೆಗೆ ಇಟ್ಟಿರೋದು ಅದು ಅಂತ ಗದರಿಸ್ತಿದ್ದ. ಆವತ್ತು ಗೆಳತೀರೆದ್ರು ಭಯಂಕರ ಅವಮಾನ ಆಗ್ಹೋಯ್ತು. ಆ ಸಿಟ್ನಲ್ಲಿ ಬೆಳಿಗ್ಗೆ ಮುಖದ್ಮೇಲೆ ದಿಂಬಿಟ್ಟು ತಕ್ಷಣ ತೆಗೆದ್ಬಿಟ್ಟೆ. ಅಷ್ಟಕ್ಕೆ ಸತ್ತೋಗ್ತಾರಾ... ನಾ ಕೊಲ್ಲಿಲ್ಲ' ಕಣ್ಣಲ್ಲಿ ನೀರು ತುಂಬಿತ್ತು. 'ಸ್ಕೂಟಿ ತಗೊಂಡ್ಯಾ?' ಕೇಳಿದ. 'ಇಲ್ಲ, ಯಾರಿಗ್ಬೇಕು ಸ್ಕೂಟಿ?' ಕಣ್ಣೊರೆಸಿಕೊಂಡವಳು 'ಅದ್ನ ಅಳಿಸ್ಬಾಕಿ... ಕಾಲಿಗೆ ಬೀಳತೀನಿ ಬೇಕಿದ್ರೆ' ಅಂದಳು. ಪದ್ಮನಾಭ ಒಂದು ಕ್ಷಣ ಮೆತ್ತಗಾದ. ಆದರೆ ಒಳಗೆ ತೂಗುಯ್ಯಾಲೆಯಾಡಿ ಇದು ಸುಸಂಧಿ ಅಂತ ಮತ್ತೆ